ಓ:ಎಸ್:ನಂ.78/2019

ಪಿ.ಡಬ್ಲ್ಯೂ- 1

ದಿನಾಂಕ: **12-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ **ಪಾಟೀ ಸವಾಲು:** ಪ್ರತಿವಾದಿ ಪರ **ವಕೀಲರಿಂದ**

ಹನುಮಯ್ಯನವರ ಕುಟುಂಬದಲ್ಲಿ ಆದ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಹನುಮಯ್ಯನವರಿಂದ ನನ್ನ ತಂದೆ ನಿಂಗಪ್ಪನವರು ದಾವ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದು, ಆ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಹನುಮಯ್ಯನವರು ದಾವ ಸ್ವತ್ತನ್ನು ಅನುಭವಿಸುತ್ತಿದ್ದ ಬಗ್ಗೆ ಯಾವುದಾದರೂ ಕಂದಾಯ ರಸೀದಿ ಹಾಗೂ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಕಂದಾಯ ರಿಸೀದಿಗಳು ನನಗೆ ಸಿಕ್ಕಿರುವುದಿಲ್ಲ ಎಂದು ನುಡಿದಿರುತ್ತಾರೆ. ಹನುಮಯ್ಯನವರಿಂದ ನಿಮ್ಮ ತಂದೆ ಕ್ರಯಕ್ಕೆ ಪಡೆದ ನಂತರ ಸದರಿ ಸ್ವತ್ತಿನಲ್ಲಿ ಸ್ವಾಧೀನ ಇರುವ ಬಗ್ಗೆ ಕಂದಾಯ ರಸೀದಿ ಇದುವರೆಗೂ ಯಾವುದು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿರುವುದಿಲ್ಲ ಎಂದು ನುಡಿದಿರುತ್ತಾರೆ.

ಯಾವುದೇ ಕಂದಾಯ ಅಧಿಕಾರಿಗಳು ನಮ್ಮನ್ನು ಬಂದು ಕಂದಾಯ ಕಟ್ಟಲು ಕೇಳಿರುವುದಿಲ್ಲ. ದಾವ ಸ್ವತ್ತನ್ನು ಸಿದ್ದಪ್ಪರವರಿಂದ ನಮ್ಮ ಅಜ್ಜ ಖರೀದಿ ಮಾಡಿದ್ದು, ಸಿದ್ದಪ್ಪರವರಿಗೆ ದಾವ ಸ್ವತ್ತನ್ನು ಮಾರಾಟ ಮಾಡಲು ಯಾವುದೇ ಹಕ್ಕು ಇರುವುದಿಲ್ಲಎಂದರೆ ಸರಿಯಲ್ಲ. ಸಿದ್ದಪ್ಪನವರ ಹೆಸರಿನಲ್ಲಿ ಮಾಲೀಕರು ಎಂದು ತೋರಿಸಲು ಮೂಲ ದಾಖಲಾತಿಗಳು ಇರಲಿಲ್ಲ ಎಂದರೆ ಸರಿಯಲ್ಲ ನೀವು ನ್ಯಾಯಾಲಯಕ್ಕೆ ನೀಡಿರುವ ಕ್ರಯಪತ್ರದಲ್ಲಿ ದಾವ ಸ್ವತ್ತು ಬಸಪ್ಪನವರದ್ದು ಎಂದು ಬರೆದಿರುತ್ತದೆ ಎಂದರೆ ಸರಿಯಲ್ಲ. **21-07-1950** ನೇ ಇಸವಿಯಲ್ಲಿ ಸಿದ್ದಪ್ಪ ಬಿನ್ ಹನುಮಣ್ಣನವರಿಗೆ ದಾವ ಸ್ವತ್ತನ್ನು ಮಾರಾಟ ಮಾಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನೀವು ನ್ಯಾಯಾಲಯಕ್ಕೆ ಸಲ್ಲಿಸಿರುವ ಎರಡೂ ಕ್ರಯಪತ್ರಗಳಲ್ಲೂ ಸಹ ಸಿದ್ದಪ್ಪನವರಿಂದ ನಿಮ್ಮ ಅಜ್ಜನಾದ ಕರಿಯಪ್ಪನವರಿಗೆ ಬಂದಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಮ್ಮ ತಂದೆಗೆ ಬಂದಿರುವ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ದಾವ ಸ್ವತ್ತನ್ನು ಅಳತೆ ಮಾಡಿಸಲು ಯಾವುದೇ ಅರ್ಜಿಯನ್ನು

ಇದುವರೆಗೂ ನೀಡಿಲ್ಲ ಎಂದರೆ ಸಾಕ್ಷಿ ಅದು ಅಸಸ್ ಮೆಂಟ್ ಆದ ಕಾರಣ ಅಳತೆ ಮಾಡಿಸಿಲ್ಲ ಎಂದು ನುಡಿದಿರುತ್ತಾರೆ. ನೀವು ನ್ಯಾಯಾಲಯಕ್ಕೆ ಸಲ್ಲಿಸಿರುವ ಎರಡೂ ಕ್ರಯಪತ್ರಗಳಲ್ಲಿ ಕಾನೇಶುಮಾರಿ ನಂ. **18,19,21** ರ ಪ್ರಕಾರ ತಿಳಿಸಿರುತ್ತಿರಾ ಎಂದರೆ ಸರಿ. ನೀವು ದಾವ ಸ್ವತ್ತಿನಲ್ಲಿ ಬೆಳೆ ಬೆಳೆಯುವ ಸಲುವಾಗಿ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಾವು ತೆಂಗಿನ ಮರಗಳನ್ನು ಬೆಳೆಸಿರುತ್ತೇವೆ ಎಂದು ನುಡಿದಿರುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಕ್ರಯಪತ್ರದ ಆಧಾರದ ಮೇಲೆ ನಾನು ಸಂಪೂರ್ಣ ಮಾಲೀಕ ಎಂದು ಘೋಷಣೆ ಮಾಡಬೇಕೆಂದು ಕೇಳಿಕೊಂಡಿರುತ್ತೇನೆ. ದಾವ ಸ್ವತ್ತಿನ ಚಕ್ಕುಬಂದಿಯಲ್ಲಿ ದಕ್ಷಿಣಕ್ಕೆ ನಮ್ಮದೇ **1** ಎಕರೆ **28** ಗುಂಟೆ ಜಮೀನು ಇದೆ ಎಂದರೆ ಸರಿ. ಅದರ ದಕ್ಷಿಣಕ್ಕೆ ಚೆನ್ನಾಪುರದ ಬಸಣ್ಣನವರ ಜಮೀನು ಇದೆ ಎಂದರೆ ಸರಿ. ನನ್ನ **1** ಎಕರೆ **20** ಎಕರೆಯ ಜಮೀನಿನ ಪೂರ್ವಕ್ಕೆ ಸರ್ಕಾರಿ ಜಮೀನು ಬರುತ್ತದೆ. ಸಣ್ಣತಿಮ್ಮಪ್ಪನ ಜಮೀನು ಗ್ರಾಮ ಠಾಣಾ ಪೂರ್ವಕ್ಕೆ ಬರುತ್ತದೆ ಎಂದರೆ ಸರಿ. ದಾವ ಸ್ವತ್ತಿನ ಪಶ್ಚಿಮಕ್ಕೆ ಹತ್ತಿಗನಾಳು ರೋಡ್ ಬರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

ನೀವು ದಾವ ಸ್ವತ್ತಿನಲ್ಲಿ ನೀಡಿರುವ ಚಕ್ಕುಬಂದಿ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನೀವು ಸುಳ್ಳು ಚಕುಂಕಬಂದಿ ನೀಡಿರುತ್ತಿರಾ ಎಂದರೆ ಸರಿಯಲ್ಲ. ನೀವು ಗ್ರಾಮ ಠಾಣಾದ **1** ಎಕರೆ **18** ಗುಂಟೆಯನ್ನು ಒತ್ತುವರಿ ಮಾಡಿರುತ್ತಿರಾ ಎಂದು ಸರ್ವೆ ಸ್ಕೆಚ್ ನೀಡಿರುತ್ತಾರೆಂದರೆ ಸರಿಯಲ್ಲ ಮತ್ತು ಗ್ರಾಮ ಠಾಣಾದ **1** ಎಕರೆ **5** ಗುಂಟೆಯನ್ನು ಸಹ ನೀವು ಒತ್ತುವರಿ ಮಾಡಿರುತ್ತಿರಾ ಎಂದರೆ ಸರಿಯಲ್ಲ. ಸರ್ವೆ ನಂ. **128** ರ ಉತ್ತರದ ಕಡೆಗೆ ಗ್ರಾಮ ಠಾಣಾದ **1** ಎಕರೆ **5** ಗುಂಟೆಯನ್ನು ನೀವು ಒತ್ತುವರಿ ಮಾಡಿರುತ್ತಿರಾ ಎಂದರೆ ಸರಿಯಲ್ಲ. ಸರ್ವೆ ಇಲಾಖೆಯವರು ನೀವು ಒತ್ತುವರಿ ಮಾಡಿರುವ ಬಗ್ಗೆ ಸ್ಕೆಚ್ ನ್ನು ನೀಡಿರುತ್ತಾರೆಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ ನಿಮ್ಮ ಪೂರ್ವಿಕರಿಂದ ಯಾರೂ ಸಹ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ನೀವು ತಿಳಿಸಿರುವಂತೆ ದಾವ ಸ್ವತ್ತು **18 19 21** ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಅಜ್ಜನವರು ಯಾವುದೇ ಸ್ವತ್ತನ್ನು ಖರೀದಿ ಮಾಡಿರುವುದಿಲ್ಲ, ನೀವು ನ್ಯಾಯಲಯಕ್ಕೆ ಸುಳ್ಳು ಕ್ರಯಪತ್ರವನ್ನು ಹಾಜರುಪಡಿಸಿರುತ್ತಿರಾ ಎಂದರೆ ಸರಿಯಲ್ಲ. ಗ್ರಾಮ ಠಾಣೆಯ **7** ಎಕರೆ ಜಮೀನಿನಲ್ಲಿ ದಾವ ಸ್ವತ್ತು

ಇದ್ದು, ಅದನ್ನು ನೀವು ನಿಮ್ಮದು ಎಂದು ಸದರಿ ದಾವೆಯನ್ನು ಹೂಡಿರುತ್ತೀರಾ ಎಂದರೆ ಸರಿಯಲ್ಲ.ನೀವು ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**